ಅಮ್ಮನಂತೆ ಅವನ ಉಮ್ಮನಿಗೇನೂ ಅದೊಂದು ಆವಶ್ಯಕ ವಿಷಯವೆಂದು ಅನಿಸಿರಲಿಲ್ಲ. ನನ್ನಮ್ಮನಿಗೆ ನಾನು ಓದುವುದು ಮತ್ತು ಒಂದು ಗೌರ್ಮೆಂಟು ನೌಕರಿ ಹಿಡಿಯುವುದು ಬೇಶರತ್ ಜರೂರಾಗಿತ್ತು. ಹಾಗೆ ನಾನು ಸ್ಕೂಲಿಗೆ ಹೋಗುತ್ತಿದ್ದರೆ ಬಾಪುಟ್ಟಿ ಮೀನು ಮಾರತೊಡಗಿದ. ಇಡೀ ಊರಿಗೆ ಅವನ ಮೀನು ಗಾಡಿ, ಅದರ ಪೇಂ ಪೇಂ ಹಾರ್ನು, ಅವನ ಮೀನಿನ ತಾಜಾತನ, ಬೆಲೆ, ಅವನ ಹುಷಾರಿ ಮಾತುಗಳು, ಚುರುಕುತನ ಎಲ್ಲವೂ ಪರಿಚಯವಾಗತೊಡಗಿ ಅವನು ಎಲ್ಲರಿಗೂ ಪರಿಚಯವಾದ. ಕೆಲವರಿಗೆ ಆತ್ಮೀಯವೆನಿಸುವಷ್ಟು ಇಷ್ಟದವನಾದ. ಇಡೀ ಊರಿನ ಮನೆಮನೆಗೂ ಹೋಗಿ ಬರುವಷ್ಟು ಪಳಗಿದ. ಹಾಗೆಯೇ ನಾಯರ್ ಅಂಗಡಿಗೆ ನಿತ್ಯವೂ ಮೀನು ಸಪ್ಲೈ ಮಾಡಲಿಕ್ಕೂ ತೊಡಗಿದ. ನಾಯರ್ ಅಂಗಡಿಯಲ್ಲಿ ಈಗ ಮೀನು ಸಾರೂ ಘಮಘಮಿಸತೊಡಗಿತ್ತು. ಹಾಗೆ ಅವನು ಮೀನು ಒಯ್ಯುವಾಗ ನಿತ್ಯವೂ ದಾರಿ ಕಾದು ಪಾತ್ರೆಗೆ ಮೀನು ಹಾಕಿಸಿಕೊಳ್ಳುವ ಕೆಲಸ ಪ್ರಭಾಳ ಪಾಲಿಗೆ ಬಂದಿತ್ತು. ಮೊದಲೆಲ್ಲ ಸಣ್ಣ ನಗುವಿನೊಂದಿಗೆ ತೊಡಗಿ, ನಿಧಾನಕೆ ಮಾತಿಗೆ ಇಳಿದು, ಕೆಲವೊಮ್ಮೆ ಅವಳಿಗೆ ಮೀನು ಶುದ್ಧ ಮಾಡಲು ನೆರವಾಗಿ, ಅಂತೂ ನಾಯರಂಗಡಿಗೆ ಯಾವಾಗ ಹೋದರೂ ಫ್ರೀಯಾಗಿ ಊಟ ಮಾಡುವಷ್ಟು, ಟೀ ಕುಡಿವಷ್ಟು ಹತ್ತಿರವಾದ. ಅವನು ಹೋದಾಗಲೆಲ್ಲ ಪ್ರಭಾ ಸುಮ್ಮನೆ ಸಣ್ಣ ನೆಪಹೂಡಿಕೊಂಡು ಅವನ ಮುಂದೆ ಸುಳಿದಾಡಿ ಕಣ್ಣ ಕೊನೆಯಲ್ಲಿ ನಾಚಿಕೆಯ ನಗುವೊಂದನ್ನು ರವಾನಿಸಿ ಹೋಗುತ್ತಿದ್ದಳು. ಇದೆಲ್ಲವೂ ಕಂಡೂ ಕಾಣದಂತಿದ್ದುಕೊಂಡು ನಾಯರ್ ಹಕ್ಕಿ ಹಾರದಂತೆ, ಕೈಗೂ ಸಿಗದಂತೆ ಕಾಯ್ದುಕೊಳ್ಳುತ್ತ ತನ್ನ ವ್ಯಾಪಾರ ಬೆಳೆಸುವ ಕಡೆಗೆ ಗಮನ ಕೊಟ್ಟಿದ್ದ. ಈಗೆಲ್ಲ ಪೇಟೆಯಿಂದ ಏನೇ ಬೇಕಿದ್ದರೂ ಬಾಪುಟ್ಟಿಯೇ ತಂದುಕೊಡುತ್ತಿದ್ದ. ಜೊತೆಗೆ ಪ್ರಭಾಳಿಗಾಗಿ ಸಣ್ಣಪುಟ್ಟ ಉಡುಗೊರೆಗಳಲ್ಲದಂತ ಉಡುಗೊರೆಗಳು, ಬಳೆ ಕ್ಲಿಪ್ಪು, ಹೇರ್‌ಪಿನ್ನು, ಬಿಂದಿ ಇಂಥವು. ಅಂತೂ ಬೆಟ್ಟದಲ್ಲಿ ಸಣ್ಣಗೆ ತೊರೆಯ ಹಾಗೆ ಹರಿವ ಮಾಡುನದಿ, ಇಳಿಯುತ್ತ ಇಳಿಯುತ್ತ ದೊಡ್ಡ ಜಲಪಾತವಾದ ಹಾಗೆ ಪ್ರಭಾ ಬಾಪುಟ್ಟಿ ತಮ್ಮದೇ ಲಯದಲ್ಲಿ ಸಾಗುತ್ತಿದ್ದರು. ನನ್ನೊಡನೆ ಏನನ್ನೂ ಮುಚ್ಚಿಡದೆ ಇದ್ದ ಬಾಪುಟ್ಟಿ ತೀರ ನಾನೇ ಖುದ್ದಾಗಿ ಕೇಳುವ ತನಕ ನನ್ನೊಂದಿಗೂ ಏನನ್ನೂ ಬಾಯಿ ಬಿಟ್ಟಿರಲಿಲ್ಲ. ತಡೆಯಲಾರದೆ ನಾನೇ ಕೇಳಿದಾಗ ಹಾಗೆ ಎಲ್ಲ ಎಂಥದೂ ಇಲ್ಲ ಮಾರಾಯ, ಅವಳೂ ಏನೂ ಹೇಳಿಲ್ಲ ನಾನೂ ಹೇಳಿಲ್ಲ. ಅವಳ ಕಣ್ಣು ನೋಡುವಾಗ ಇಷ್ಟ ಕಾಣ್ತದೆ, ಇನ್ನು ನಂಗೆ ಅವಳು ಮೊದಲಿಂದ ಇಷ್ಟ, ನಿಂಗೆ ಗೊತ್ತಿಲ್ಲವಾ, ನಾನು ಹೊಳೆ ದಾರಿಲಿ ಅವಳಿಗಾಗಿ ಕಾಯ್ತಾ ಇರ್ತಾ ಇದ್ದದ್ದು? ಅಂದಿದ್ದ. ಅರೆ ಇವನ! ಇವನ ಜೊತೆಗೂ ನಾನೂ ಕಾಯ್ತಿದ್ದೆನಲ್ಲವೆ? ಈಗ ನೋಡು ಹೇಗೆ ಮಾತಾಡ್ತಾ ಇದಾನೆ ಕಳ್ಳ ಅನಿಸಿ ನನಗೆ ನಗು ಬಂದಿತ್ತು. ಅಷ್ಟರ ಹೊರತು ನನಗೆ ಪ್ರಭಾ ಬಾಪುಟ್ಟಿ ಪ್ರೀತಿಸಿದರೆ, ಮದುವೆಯಾದರೆ ಸಂತೋಷವಲ್ಲದೆ ಬೇರೇನೂ ಇರಲಿಲ್ಲ. ಎಲ್ಲವೂ ನಮ್ಮ ಸಂತೋಷದಂತೆ ನಡೆದುಬಿಟ್ಟರೆ ಬದುಕಿನಲಿ ಸಂತೋಷಕ್ಕೆ ಮಹತ್ವವೇನಿದ್ದೀತು, ಅಲ್ಲವೇ?

ಬಾಪುಟ್ಟಿಯ ಮೀನು ವ್ಯಾಪಾರ ಸುಧಾರಿಸುತ್ತ ಅವನು ಮಾಡುಬೆಟ್ಟದ ಬದಿಯಲ್ಲಿದ್ದ ಪೈಸಾರಿನೆಲದಲ್ಲಿ ಜಾಗೆ ಹಿಡಿದು ಮನೆ ಕಟ್ಟತೊಡಗಿದ್ದ. ಅವನು ನನಗೆಷ್ಟು ಅಣ್ಣನಂಥವನೆಂದರೆ ನನಗಾಗಿಯೂ ಜಾಗ ಗುರ್ತಿಸಿಕೊಂಡು ಬೇಲಿ ಹಾಕಿದ್ದ. ಅದನ್ನು ಪಟ್ಟಾ ಮಾಡಿಸುವುದು ಹೇಗೆ, ಯಾರನ್ನು ಕಾಣುವುದು ಏನು ಕಥೆ ಎಂಬಿತ್ಯಾದಿ ಓಡಾಟದಲ್ಲೂ ತೊಡಗಿಕೊಂಡು, ನಡುನಡುವೆ ನನ್ನ ಓದಿಗೆಂದು ಸುಮ್ಮನೆ ತೋಚಿದಷ್ಟು ಹಣ ಕೊಡುತ್ತ, "ನಾನಂತೂ ಓದಲಿಲ್ಲ. ಈ ಬಾಪುಟ್ಟಿಯ ಗೆಳೆಯ ನೀನು, ನನ್ನ ಓದನ್ನೂ ಸೇರಿ ನೀನೇ ಓದಿ ದೊಡ್ಡ ಆಫೀಸರಾಗಬೇಕು ಆಯ್ತಾ" ಎಂದು ಫರ್ಮಾನು ಹೊರಡಿಸುತ್ತಿದ್ದ. ನಾವು ಮೊದಲಿಂದಲೂ ಹಾಗೇ, ದಿನವಿಡೀ ಅದೇನೇ ಕೆಲಸವಿದ್ದಿರಲಿ, ದಿನಾಗಲೂ ಸಂಜೆ ನಾವಿಬ್ಬರೂ ಮಾಡುಹೊಳೆಯ ದಂಡೆಯಲ್ಲಿದ್ದ ಕರುಂಗಲ್ಲಿನ ಮೇಲೆ ತುಸು